

ನೀಚತನದಲ್ಲಿ, ಜನಾಂಗೀಯ ದ್ವೇಷಗಳಲ್ಲಿ, ಧರ್ಮ ಮತ್ತು ಮತೀಯ ವಿಚಾರಗಳಲ್ಲಿ ಇಡೀ ನಾಗರಿಕತೆ ಮತ್ತು ಅದು ಕಂಡುಕೊಂಡ ಭಾಷೆಗಳಲ್ಲಿ ವಿಪರೀತ ಮಾನವ ನಷ್ಟ ಉಂಟಾಗಿದೆ. ಯಾವುದು ಒಳ್ಳೆಯ ಶ್ರೇಷ್ಠ ನಂಬಿಕೆ ಎಂದೆನಿಸಿದೆಯೊ, ಸನ್ಮಾರ್ಗ ಎನಿಸಿದೆಯೋ ಅದರಿಂದಾಗಿರುವಷ್ಟು ರಕ್ತಪಾತಗಳು, ಬಡವರ ನೈಸರ್ಗಿಕ ನಂಬಿಕೆಗಳ ಮುಗ್ಧತೆಯಿಂದ ಆಗಿಲ್ಲ. ಧರ್ಮಗಳು ಹರಿಸಿರುವ ನೆತ್ತರು ಈಗಲೂ ಜಿನುಗುತ್ತಲೇ ಇದೆ. ಸಾಮಾನ್ಯ ಜನರ ನೀತಿತತ್ವದಲ್ಲೂ ಒಂದು ಪ್ರಾಂಜಲ ಪ್ರಾಣಶಕ್ತಿ ಅಡಗಿದೆ. ಅವರು ಯುದ್ಧ ಸಾರಲಿಲ್ಲ. ಕಾಯಕದಲ್ಲಿ ಬದುಕಿದ್ದರು. ನಿಸರ್ಗವನ್ನು ಆಚರಿಸುತ್ತಿದ್ದರು. ಲೇಖಕರು ತಮ್ಮ ಬರಹದಲ್ಲಿ ನಿಜವಾದ ಪ್ರಾಣತತ್ವ ಕಂಡುಕೊಳ್ಳದಿದ್ದರೆ ಅದು ಬೂಸಾ ಆಗುತ್ತದೆ.

ದಲಿತ ಸಾಹಿತ್ಯದ ತಾಯಿಬೇರು ಅಂತಃಕರಣ. ಅದು ನೆಲದ ಸಾರ ಅವಲಂಬಿಸಿ ವ್ಯಕ್ತವಾಗುವ ಪ್ರಾಂಜಲತೆ. ದಲಿತ ಸಾಹಿತ್ಯ, ಸಂಘರ್ಷವನ್ನು ಹೊಂದಿದ್ದರೂ ಅದು ಬಂಧಿಸಲ್ಪಟ್ಟ ಜೀವಕ್ಕೆ ವಿಮೋಚನೆಯ ದಾರಿ ಹುಡುಕುತ್ತದೆ. ದಲಿತ ಸಾಹಿತಿಗಳಲ್ಲಿ ಬೆರಳೆಣಿಕೆಯಷ್ಟೇ ಲೇಖಕರು ಇಂಥ ಪ್ರಾಣತತ್ವವನ್ನು ತಮ್ಮ ಸಂವೇದನೆಯ ರಹದಾರಿ ಮಾಡಿಕೊಂಡಿದ್ದಾರೆ. ಉತ್ಕಟತೆ ದಲಿತ ಸಾಹಿತ್ಯದಲ್ಲಿ ಯಾಕೆ ಈ ಪರಿಯಲ್ಲಿ ವ್ಯಕ್ತವಾಗುತ್ತದೆ ಎಂದರೆ ಬಹುಕಾಲದ ತಲೆಮಾರುಗಳ ಎಲ್ಲಾ ವಿಮೋಚನೆಯ ಕನಸು ಒಟ್ಟಾಗಿ ಧಾವಿಸಿಬಂದಿರುತ್ತದೆ. ನಮ್ಮ ಭಾಷೆಯಲ್ಲಿ ಯಾರೋ ಕೆಲವರಷ್ಟೇ ಇರುವುದಿಲ್ಲ. ಇಡೀ ಕಾಲ ದೇಶವೇ ಅವುಗಳ ತಲೆಮಾರುಗಳೇ ಸಮಷ್ಟಿಯಾಗಿ ಬಂದು ಬಿಡುಗಡೆಗೆ ಒತ್ತಾಯಿಸುತ್ತಿರುತ್ತವೆ. ಉತ್ಕಟತೆಯಿಂದಾಗಿಯೇ ದಲಿತರು ಬಳಸುವ ಸಾಹಿತ್ಯ ಭಾಷೆ ಬದಲಾದದ್ದು. ಉತ್ಕಟತೆ ಸಾಹಿತ್ಯದಲ್ಲಿ ದೀರ್ಘ ಆಲಾಪದಂತೆ ಭಾವನೆಗಳನ್ನು ಬೆಸೆದುಕೊಳ್ಳುತ್ತದೆ. ಹೀಗಾಗಿಯೇ ದಲಿತ ಸಾಹಿತ್ಯದಲ್ಲಿ ಆರ್ದ್ರತೆಯ ಕಾವ್ಯಾತ್ಮಕ ನಿರೂಪಣೆಗಳು ವ್ಯಕ್ತವಾಗುವುದು. ನಮಗೆ ಕಥೆ ಹೇಳುವುದು ಮುಖ್ಯವೇ ಅಲ್ಲ. ಅದನ್ನು ಯಾರು ಬೇಕಾದರೂ ಜಾಣ್ಮೆಯಿಂದ ಕಟ್ಟಬಲ್ಲರು. ನಮಗೆ ತಾಯಿಯ ಮಮಕಾರದ ವಾತ್ಸಲ್ಯ ಮುಖ್ಯ. ಅದರಲ್ಲಿ ಮುಳುಗಿ ಬಂದವರಲ್ಲಿ ನಾನೂ ಒಬ್ಬ. ನನ್ನ ಮಿದುಳಲ್ಲಿ ಅನಾದಿ ಕಾಲದ ಪೂರ್ವಿಕರೆಲ್ಲ ಕೂತಿದ್ದಾರೆ.

**◆ ನೀವು ನಿಮ್ಮ ‘ತಕರಾರು’, ‘ಜಾತಿ ಮೀಮಾಂಸೆ’,**